**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ವಿರಾಜಪೇಟೆ**

**ಕ್ರಿ.ಮೊ.ಸಂ.1206/2025**

ಪಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ,
ಸಿದ್ದಾಪುರ ಪೋಲೀಸ್ ಠಾಣೆ.

ವಿರುದ್ದ

ಆರೋಪಿಗಳು : **1.** ಪಿ.ಎಂ.ಮಜೀದ್.
ತಂದೆಃ ಪೌತಿ ಮೊಯ್ದು.
ಪ್ರಾಯ **36** ವರ್ಷ.
ವಾಸಃ ಊರುಗುಪೆ,
ಪಾಲಿಬೆಟ್ಟ, ವಿರಾಜಪೇಟೆ ತಾಲ್ಲೂಕು.

**2.** ಪಿ.ಹೆಚ್. ಮುನಾವರ್.
ತಂದೆಃ ಪೌತಿ ಹಾರೀಸ್.
ಪ್ರಾಯ **26** ವರ್ಷ.
ವಾಸಃ ಪಾಲಿಬೆಟ್ಟ,
ಮೇಕೂರು ಹೊಸ್ಕೇರಿ ಗ್ರಾಮ,
ವಿರಾಜಪೇಟೆ ತಾಲ್ಲೂಕು.

## ದೋಷಾರೋಪಣೆ

ಪ್ರದೀಪ ಪೋತದಾರ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನಾ.ದಂ ಆದ ನಾನು ಈ ಮೇಲಿನ ಆರೋಪಿಗಳಾದ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ,

ಆರೋಪಿಗಳಾದ ನೀವುಗಳು ದಿನಾಂಕಃ **21.07.2025** ರಂದು ಪಾಲಿಬೆಟ್ಟದ ಆರ್ಕಾಡ್ ನಲ್ಲಿರುವ ಸಾರ್ವಜನಿಕ ಬಸ್ಸು ತಂಗುದಾಣದ ಬಳಿ ವ್ಯಾಗನಾರ್ ಕಾರು ಕೆಎ**-04-**ಎಂಎ**-4873** ರಲ್ಲಿ ಕುಳಿತುಕೊಂಡು ಸಿದ್ದಾಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೊಂಡಂಗೇರಿ ಗ್ರಾಮದ

ಪರಂಬುವಿನಲ್ಲಿ ವಾಸವಿರುವ ಚಾಸಾ-1 ಮತ್ತು ಚಾಸಾ-2 ರವರಿಂದ ಚಿನ್ನಾಭರಣ ಹಾಗೂ ನಗದು ಹಣವನ್ನು ದರೋಡೆ ಮಾಡಲು ಜಂಟಿಯಾಗಿ ಒಳಸಂಚು ರೂಪಿಸಿದ್ದು, ಅದರಂತೆ 1ನೇ ಆರೋಪಿಯಾದ ನೀವು ಪಾಲಿಬೆಟ್ಟ ನಗರದಲ್ಲಿರುವ ಸಿ.ವಿ. ಸ್ಟೋರ್ಸ್ ಹಾಗೂ ರಾಧ ಮೆಡಿಕಲ್ ಶಾಪಿನಿಂದ ಹ್ಯಾಂಡ್ ಗ್ಲೌಸ್‌ಗಳನ್ನು ಖರೀದಿಸಿ ಹಾಗೂ ಕಾರಿನಲ್ಲಿ ಇಟ್ಟುಕೊಂಡಿದ್ದ ಚಾಕುವನ್ನು 2ನೇ ಆರೋಪಿಯಾದ ನಿಮಗೆ ನೀಡಿದ್ದು, ಸಮಯ ಮಧ್ಯಾಹ್ನ 01.30 ಗಂಟೆಗೆ 2ನೇ ಆರೋಪಿಯಾದ ನೀವು ಚಾಸಾ-1 ಹಾಗೂ 2 ರವರ ಮನೆಗೆ ನುಗ್ಗಿ, ಕೈಯಲ್ಲಿದ್ದ ಚಾಕುವಿನಿಂದ ಚಾಸಾ-2 ರವರ ಬಲಕಣ್ಣಿನ ಕೆಳಭಾಗ, ಎಡಕಣ್ಣಿನ ಹುಬ್ಬಿನ ಕೆಳಭಾಗಕ್ಕೆ ಹಲ್ಲೆ ಮಾಡಿ, ಚಾಸಾ-2 ರವರ ಕುತ್ತಿಗೆಯಲ್ಲಿದ್ದ 14 ಗ್ರಾಂ ತೂಕದ ರೂ.1,30,000/- ಮೌಲ್ಯದ ಚಿನ್ನದ ಸರ ಹಾಗೂ ಪೆಂಡೆಂಟನ್ನು ಕಸಿದುಕೊಂಡಿರುತ್ತೀರಿ. ನಂತರ ಚಾಸಾ-1 ರವರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕಸಿಯಲು ಪ್ರಯತ್ನಿಸಿ ಚಾಕುವಿನಿಂದ ಚಾಸಾ-1 ರವರ ಎಡಕೈ, ಎಡಕುತ್ತಿಗೆಯ ಭಾಗಕ್ಕೆ ಹಲ್ಲೆ ಮಾಡಿ ಗಾಯವನ್ನುಂಟು ಮಾಡಿರುತ್ತೀರಿ ಎಂದಾಗಿರುತ್ತದೆ. ಆ ಮೂಲಕ ಆರೋಪಿಗಳಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 309(6) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಈ ಮೇಲಿನ ದೋಷಾರೋಪಣೆಯ ವಿಚಾರಣೆಯು ಈ ನ್ಯಾಯಾಲಯದಲ್ಲಿ ನಡೆಯತಕ್ಕದೆಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

sd/-

**ಸ್ಥಳಃವಿರಾಜಪೇಟೆ** **ಪ್ರದೀಪ್ ಪೋತದಾರ**
**ದಿನಾಂಕಃ13.03.2026.** **ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ.**

**<u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ವಿರಾಜಪೇಟೆ</u>**

**<u>ಕ್ರಿ.ಮೊ.ಸಂ.1206/2025</u>**

ಪಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ,
ಸಿದ್ದಾಪುರ ಪೋಲೀಸ್ ಠಾಣೆ.
ವಿರುದ್ಧ

ಆರೋಪಿ : **1.** ಪಿ.ಎಂ.ಮಜೀದ್.
ತಂದೆಃ ಪೌತಿ ಮೊಯ್ದು.
ಪ್ರಾಯ **36** ವರ್ಷ.
ವಾಸಃ ಊರುಗುಪೆ,
ಪಾಲಿಬೆಟ್ಟ, ವಿರಾಜಪೇಟೆ ತಾಲ್ಲೂಕು.

**ಆರೋಪ**

ಪ್ರಶ್ನೆ **1** : ನಿಮಗೆ ಓದಿ ಹೇಳಲಾದ ಆರೋಪವನ್ನು ಅರ್ಥಮಾಡಿಕೊಂಡಿದ್ದೀರಾ?

ಉತ್ತರ : yes

ಪ್ರಶ್ನೆ **2** : ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಲೇಬೇಕೆ?

ಉತ್ತರಃ Accused pleaded not guilty and claimed to be tried.

ಮೇಲಿನ ಆರೋಪವನ್ನು ಆರೋಪಿ ತನಗೆ ಅರ್ಥವಾಗುವ ರೀತಿಯಲ್ಲಿ ತರ್ಜುಮೆ ಮಾಡಿಸಿ ಓದಿ ಹೇಳಿ ವಿವರಿಸಿ ಆತನು ನೀಡಲಾದ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ಸರಿಯಾದ ಮತ್ತು ನಿಜವಾದ ಉತ್ತರವೆಂದು ದೃಡೀಕರಿಸುತ್ತೇನೆ.

**sd/-**

**ಸ್ಥಳಃವಿರಾಜಪೇಟೆ** **ಪ್ರದೀಪ್ ಪೋತದಾರ**
**ದಿನಾಂಕಃ 13.03.2026** **ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ವಿರಾಜಪೇಟೆ**

**ಕ್ರಿ.ಮೊ.ಸಂ.1206/2025**

ಪಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ,
ಸಿದ್ದಾಪುರ ಪೋಲೀಸ್ ಠಾಣೆ.

ವಿರುದ್ಧ

ಆರೋಪಿ : **2.** ಪಿ.ಹೆಚ್. ಮುನಾವರ್.
ತಂದೆಃ ಪೌತಿ ಹಾರೀಸ್.
ಪ್ರಾಯ **26** ವರ್ಷ.
ವಾಸಃ ಪಾಲಿಬೆಟ್ಟ,
ಮೇಕೂರು ಹೊಸ್ಕೇರಿ ಗ್ರಾಮ,
ವಿರಾಜಪೇಟೆ ತಾಲ್ಲೂಕು.

**ಆರೋಪ**

ಪ್ರಶ್ನೆ **1** ಃ ನಿಮಗೆ ಓದಿ ಹೇಳಲಾದ ಆರೋಪವನ್ನು ಅರ್ಥಮಾಡಿಕೊಂಡಿದ್ದೀರಾ?

ಉತ್ತರಃ yes

ಪ್ರಶ್ನೆ **2** ಃ ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಲೇಬೇಕೆ?

ಉತ್ತರಃ Accused pleaded not guilty and claimed to be tried.

ಮೇಲಿನ ಆರೋಪವನ್ನು ಆರೋಪಿ ತನಗೆ ಅರ್ಥವಾಗುವ ರೀತಿಯಲ್ಲಿ ತರ್ಜುಮೆ ಮಾಡಿಸಿ ಓದಿ ಹೇಳಿ ವಿವರಿಸಿ ಆತನು ನೀಡಲಾದ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ಸರಿಯಾದ ಮತ್ತು ನಿಜವಾದ ಉತ್ತರವೆಂದು ದೃಡೀಕರಿಸುತ್ತೇನೆ.

**sd/-**

**ಸ್ಥಳಃವಿರಾಜಪೇಟೆ** **ಪ್ರದೀಪ್ ಪೋತದಾರ**
**ದಿನಾಂಕಃ 13.03.2026** **ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ.**